ಹಾಗೂ ಮೈಸೂರು ನಾಗರೀಕರಿಗೂ ಪಡಿತರ ವ್ಯವಸ್ಥೆಯಲ್ಲಿ ಸರ್ಕಾರವು ತೋರುತ್ತಿರುವ ತಾರತಮ್ಯ ವ್ಯಾಯವಲ್ಲ. ಸರ್ಕಾರದ ನೀತಿ ಒಂದು ಕಣ್ಣಿಗೆ ಬೆಣ್ಣೆ, ಒಂದು ಕಣ್ಣಿಗೆ ಸುಣ್ಣ ಎಂಬಂತಾಗಿದೆ. ಬೆಂಗಳೂರಿನಲ್ಲಿ ತಿಂಗಳಿಗೆ ತಲೆ ಒಂದಕ್ಕೆ ೩ ಕೆ. ಜಿ. ಅಕ್ಕಿಯನ್ನು ಕೊಟ್ಟು ಮೈಸೂರು ನಗರದಲ್ಲಿ ಒಂದು ಸಂಸಾರದಲ್ಲಿ ೧೦ ರಿಂದ ೧೫ ಜನರಿದ್ದರೂ ತಿಂಗಳಿಗೆ ೭ ರಿಂದ ೯ ಕೆ. ಜಿ. ಅಕ್ಕಿಯನ್ನು ಒದಗಿಸುತ್ತಿರುವ ನೀತಿಯ ಆಧಾರವೇನು ? ಸರ್ಕಾರ ಬೆಂಗಳೂರಿನಲ್ಲಿರುವ ಪಡಿತರ ಪದ್ಧತಿಯನ್ನು ಕೂಡಲೆ ಮೈಸೂರು ನಗರಕ್ಕೆ ಅನ್ವಯಿಸಬೇಕು ಎಂದು ಸಂಬಂಧಪಟ್ಟ ಸಚಿವರನ್ನು ಒತ್ತಾಯಿಸಿ ಅವರ ಉತ್ತರವನ್ನು ಅಪೇಕ್ಷಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ ಈ ಒಂದು ವಿಚಾರ ನಾನು ಈ ಖಾತೆಯನ್ನು ವಹಿಸಿಕೊಂಡಮೇಲೆ ಉದ್ಭವವಾಗಿರತಕ್ಕಂಥ ವಿಷಯವಲ್ಲ. ಬಹುಶಃ ಕಾರ್ಮಿಕರದು ಏನು ಸಮಸ್ಯೆ ಇರುತ್ತದೆ ಇದು ಹಿಂದಿನಿಂದಲೂ ನಡೆದುಬಂದಿರತಕ್ಕಂಥ ವಿಷಯವಾಗಿರುತ್ತದೆ. ಇದನ್ನು ಸರಿಪಡಿಸುವುದಕ್ಕಾಗಿ ಕೇಂದ್ರ ಸರ್ಕಾರಕ್ಕೆ ಹೆಚ್ಚು ವರಿ ಅಕ್ಕಿ ಕೊಡಬೇಕೆಂದು ಹೇಳಿ ಅವರಲ್ಲಿ ಮನವಿ ಸಲ್ಲಿಸಿದ್ದೇವೆ. ಹೆಚ್ಚುವರಿ ಅಕ್ಕಿಬಂದ ತಕ್ಷಣ ಮೈಸೂರು ನಗರದ ಜನರಿಗೆ ಬಿಡುಗಡೆ ಮಾಡಲು ಮಾನ್ಯ ಸದಸ್ಯರಾದ ಹೆಮ್ಮಿಗೆಯಂಬರು ಹೇಳಿದ ಮಾತನ್ನು ಗಮನದಲ್ಲಿಟ್ಟುಕೊಂಡು ಹೆಚ್ಚಿನ ಅಕ್ಕಿಯನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

(ii) ರಾಜ್ಯದ ಕೆಲವು ಆರೋಗ್ಯ ಕೇಂದ್ರಗಳಲ್ಲಿ ವೈದ್ಯರು ಇಲ್ಲದಿರುವುದು

೨–೩೦ ಪಿ. ಎಂ.

ಶ್ರೀ ಬಿ. ಎಸ್. ಯಡಿಯೂರಪ್ಪ —ಮಾನ್ಯ ಅಧ್ಯಕ್ಷರೇ, ಕಳೆದ ಏಳೆಂಟು ವರ್ಷಗಳಿಂದ ರಾಜ್ಯದ ಕೆಲವು ಆರೋಗ್ಯ ಕೇಂದ್ರಗಳಲ್ಲಿ ವೈದ್ಯಾಧಿಕಾರಿಗಳಿಲ್ಲದೆ ಇದ್ದು ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನ ಕೊಡದೆ ಕಣ್ಣುಮುಚ್ಚಿಕೊಂಡಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ 'ಆರಳು ಸಂರಳಿ' ಆರೋಗ್ಯ ಕೇಂದ್ರದಲ್ಲಿ ಕಳೆದ ೭ ವರ್ಷಗಳಿಂದ ವೈದ್ಯಾಧಿಕಾರಿಗಳಿಲ್ಲದೆ ಜನ ತೊಂದರೆ ಅನುಭವಿಸುತ್ತಿದ್ದಾರೆ. ಇದು ಶರಾವತಿ ಉಗಮ ಸ್ಥಾನವಾಗಿದ್ದು ಪವಿತ್ರಹಿಂದು ಸ್ಥಳ ಇಲ್ಲಿ ಹಿಂದುಳಿದ ಜನವಾಂಗದ ಕಡುಬಡವರು ವಾಸಿಸುತ್ತಿದ್ದಾರೆ. ಜೊತೆಗೆ ಮಲೆನಾಡು ಪ್ರದೇಶವಾಗಿದ್ದು ಇತ್ತೀಚಿನ ಸರಕಾರದ ಯೋಜನೆಯಂತೆ 'ಹೆರಿಗೆ ಭತ್ಯೆ' ಸಹ ಈ ಆರೋಗ್ಯ ಕೇಂದ್ರದ ವತಿಯಿಂದ ವಿತರಣೆ ಆಗಬೇಕಾಗಿದ್ದು ಇಲ್ಲಿರುವ ಆಸ್ಪತ್ರೆಗೆ, ಸ್ವಂತ ಕಟ್ಟಡ, ವೈದ್ಯಾಧಿಕಾರಿಗಳು ಇತರೆ ಸಿಬ್ಬಂದಿಗೆ ವಾಸಿಸಲು ಸರಕಾರಿ ಕ್ವಾರ್ಟರ್ಸ್‌ಗಳು ಇದ್ದರೂ ಸಹ ವೈದ್ಯಾಧಿಕಾರಿಗಳಿಲ್ಲದೆ 'ದೇವರಿಲ್ಲದ ಗುಡಿ' ಇದ್ದಂತೆ ಆಗಿದೆ.

ಈ ರೀತಿ ವೈದ್ಯಾಧಿಕಾರಿಗಳನ್ನು ನೇಮಿಸದೆ ಇರುವ ಬೇಜವಾಬ್ದಾರಿ ಅಧಿಕಾರಿಗಳ ಬಗ್ಗೆ ಸರಕಾರ ಏನು ಕ್ರಮ ಕೈಗೊಂಡಿದೆ ? ಇನ್ನು ಎಷ್ಟು ದಿವಸಗಳಲ್ಲಿ ಈ ಗ್ರಾಮಕ್ಕೆ ವೈದ್ಯಾಧಿಕಾರಿಗಳನ್ನು ನೇಮಿಸಿಕೊಳ್ಳಲಾಗುವುದು ಎಂಬ ಬಗ್ಗೆ ಸರಕಾರದ ಹೇಳಿಕೆಯನ್ನು ತಿಳಿಯಪಡಿಸುತ್ತೇನೆ.

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಹಾಗೂ ಆಬ್ಕಾರಿ ಮಂತ್ರಿಯವರು).—ಮಾನ್ಯ ಅಧ್ಯಕ್ಷರೇ, ಕಳೆದ ಏಳು ವರ್ಷಗಳಿಂದ ಅಲ್ಲಿ ವೈದ್ಯಾಧಿಕಾರಿಗಳು ಇಲ್ಲ ಎನ್ನುವ ವಿಚಾರವನ್ನು ನಾನು ನಿರಾಕರಣೆ ಮಾಡುವುದಿಲ್ಲ. ವೈದ್ಯಾಧಿಕಾರಿಯನ್ನು ಆದಷ್ಟು ಬೇಗ ನೇಮಕ ಮಾಡುವುದಕ್ಕೆ ನಾನು ಸೂಕ್ತ ಆದೇಶವನ್ನು ನೀಡುತ್ತೇನೆ.

ಶಾಸನ ರಚನೆ

೧೯೮೬ನೇ ಇಸವಿಯ ಕರ್ನಾಟಕ ಲೋಕಾಯುಕ್ತ (ಎರಡನೇ ತಿದ್ದುಪಡಿ) ವಿಧೇಯಕ ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಆಹಾರ ಹಾಗೂ ನಾಗರೀಕ ಸರಬರಾಜುಗಳ ಮಂತ್ರಿ) —ಮಾನ್ಯ ಅಧ್ಯಕ್ಷರೇ, ಮುಖ್ಯಮಂತ್ರಿಗಳ ಪರವಾಗಿ ೧೯೮೬ನೇ ಇಸವಿಯ ಕರ್ನಾಟಕ ಲೋಕಾಯುಕ್ತ (ಎರಡನೆಯ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ತಮ್ಮ ಅನುಮತಿ ಕೋರುತ್ತೇನೆ.